**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 201/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವಯ್ಯ |
| ತಂದೆಯ ಹೆಸರು | : | ಮಲಿಯಯ್ಯ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಬೊಪ್ಪನಹಳ್ಳಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 28.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1, ಚಾಸಾ-2 ಹಾಗು ಚಾಸಾ-7 ರವರ ಪರಿಚಯವಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಒಂದು ದಿನ ಜಮೀನಿನಿಂದ ಮನೆಗೆ ಹೋಗುವಾಗ ಪೋಲೀಸರು 01 ದಾಖಲೆಗೆ ಸಹಿ ಹಾಕುವಂತೆ ತಿಳಿಸಿದ್ದು, ಆಗ ನಾನು ಸಹಿ ಮಾಡಲು ಬರುವುದಿಲ್ಲ ಹೆಬ್ಬೆಟ್ಟಿನ ಗುರುತನ್ನು ಮಾತ್ರ ಹಾಕುತ್ತೇನೆ ಎಂದು ತಿಳಿಸಿದ್ದು ಆಗ ಪೋಲೀಸರು 01 ದಾಖಲೆಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ. ಅದನ್ನು ಬಿಟ್ಟು ನನಗೆ ಬೇರೇನೂ ವಿಚಾರ ಗೊತ್ತಿರುವುದಿಲ್ಲ. ಸಾಕ್ಷಿಗೆ ನಿ.ಪಿ.-5 ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸುತ್ತಾರೆ. ಸದರಿ ಮಹಜರ್ ನಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತೇನೆ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಸಿ.ಡಬ್ಲೂ.-06/ ಪಿ.ಡಬ್ಲೂ-06**

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕಃ 12.02.2022 ರಂದು ಪೋಲೀಸರು ನನ್ನನ್ನು ಹಾಗು ಚಾಸಾ-7 ರವರನ್ನು ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿ ಈ ಪ್ರಕರಣದ ವಿಚಾರವನ್ನು ತಿಳಿಸಿ ಮಹಜರ್ ಸಮಯದಲ್ಲಿ ಸಾಕ್ಷಿಯಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಕೃತ್ಯ ಸ್ಥಳದಲ್ಲಿ ಚಾಸಾ-2 ರವರು ಹಾಜರಿದ್ದು ಪೋಲೀಸರಿಗೆ ಕೃತ್ಯ ಸ್ಥಳವನ್ನು ತೋರಿಸಿ ಆರೋಪಿಯು ಕೃತ್ಯಕ್ಕೆ ಬಳಸಿದ ಬಿಯರ್ ಬಾಟಲಿ ಚೂರನ್ನು ತೋರಿಸಿಕೊಟ್ಟ ಮೇರೆಗೆ ಪೋಲೀಸರು ನನ್ನ, ಚಾಸಾ-2 ಹಾಗು ಚಾಸಾ-7 ರವರ ಸಮಕ್ಷಮ ನಿ.ಪಿ.-5 ರಂತೆ ಮಹಜರ್ ಕ್ರಮ ಜರುಗಿಸಿ ಸದರಿ ಬಿಯರ್ ಬಾಟಲಿ ಚೂರುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕದಂದು ನಿ.ಪಿ.-5 ನ್ನು ಬರೆಯುವಾಗ ಸ್ಥಳದಲ್ಲಿದ್ದು ಸದರಿ ಮಹಜರ್ ನಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು ಅದಕ್ಕೆ ನನ್ನ ಹೆಬ್ಬೆಟ್ಟಿನ ಗುರುತನ್ನು ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಏನೂ ಇರುವುದಿಲ್ಲ.**

**ಮರುವಿಚಾರಣೆ**: ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**